### ಸೇಬಿನ ಕೃಷಿ ಹೇಗೆ?

ಬಸವರಾಜು ಅವರು ಬೆಳೆದಿರುವುದು ಆ್ಯನ್ನಾ, ಆ್ಯನ್ನಾ 19 ಆಲ್, ಡಾರ್ಕ್ ಸೆಟ್ ಗೋಲ್ಡ್ ತಳಿಗಳನ್ನು. ಸೇಬು ಕೃಷಿಯ ಬಗ್ಗೆ ಅವರು ನೀಡುವ ಸಲಹೆಗಳು:

- ಮೊದಲು 2x2 ಗುಂಡಿ ತೋಡಿ.
- ಗಿಡದಿಂದ ಗಿಡಕ್ಕೆ 10 ಅಡಿ ಅಂತರವಿರಲಿ.
- ಗುಂಡಿಯ ಅರ್ಧದಷ್ಟು ಭಾಗಕ್ಕೆ ಕೊಟ್ಟಿಗೆ ಗೊಬ್ಬರ ಹಾಕಿ. ಅದರ ಮೇಲೆ ಕಪ್ಪು ಮಣ್ಣು (ಲಭ್ಯವಿದ್ದರೆ) ಹಾಕಿ. ಇಲ್ಲವಾದರೆ ತೋಟದ ಮಣ್ಣನ್ನೇ ಬಳಸಿ. ಅದರ ಮೇಲೆ ಅಲ್ಪ ಪ್ರಮಾಣದಲ್ಲಿ ಹೊಂಗೆ ಹಿಂಡಿ, ಬೇವಿನ ಹಿಂಡಿ ಹಾಕಿ.
- ಗುಂಡಿ ಮುಚ್ಚುವಂತೆ ಮಣ್ಣು ಹಾಕಿ.
- ಗಿಡ ನೆಡುವ ಮುನ್ನ ಗುಂಡಿಗೆ ನೀರು ಹಾಯಿಸಿ, ಚೆನ್ನಾಗಿ ನೆನೆಸಿ. ಆದರೆ, ಗುಂಡಿಯಲ್ಲಿ ಅತಿಯಾಗಿ ನೀರು ನಿಲ್ಲದಂತೆ ಎಚ್ಚರವಹಿಸಿ. ಇಷ್ಟೆಲ್ಲ ಆದ ಬಳಿಕ ಗಿಡ ನೆಟ್ಟು, ಪೋಷಣೆ ಮಾಡಿ.
- ಗಿಡ ಚೆನ್ನಾಗಿ ಬೇರು ಬಿಟ್ಟ ಮೇಲೆ ಒಂದು ಅಡಿಯಷ್ಟು ಗಿಡ ಬಿಟ್ಟು ಸುಳಿ (ಚಿಗುರು) ಚಿವುಟಿ.
- ಇದೇ ರೀತಿ ಅರ್ಧ ಅಡಿ, ಒಂದು ಅಡಿಯಂತೆ ಕವಟೆಗಳ ಸುಳಿಯನ್ನು ಚಿವುಟಿ. ಫಸಲು ಕಟಿಂಗ್ ವೇಳೆ ಗಿಡದಲ್ಲಿ ಒಂದೇ ಒಂದು ಎಲೆಯೂ ಇರದಂತೆ ಕಿತ್ತುಹಾಕಿ.

ಪಡೆದು ಫೋನ್ ಮಾಡಿದೆ. ಶರ್ಮಾ ಅವರಿಂದ, ವಿಜಯಪುರದಲ್ಲಿ ಆ್ಯಪಲ್ ಕೃಷಿ ಮಾಡಿ ಸೈ ಎನಿಸಿಕೊಂಡಿದ್ದ ಸಚಿನ್ ಬಾಲಗೊಂಡ ಅವರ ಮೊಬೈಲ್ ನಂಬರ್ ಸಿಕ್ಕಿತು. ಅಲ್ಲಿಂದ ನನ್ನ ಕನಸಿಗೆ ಜೀವ ಬಂತು' ಎನ್ನುತ್ತಾರೆ ಬಸವರಾಜು.

ಮೊದಲಿಗೆ ಸಚಿನ್ ಅವರಿಂದಲೇ 442 ಗಿಡ ತರಿಸಿಕೊಂಡರು. ಗಿಡವೊಂದಕ್ಕೆ ₹300ರಂತೆ ₹1,32,600 ಖರ್ಚಾಯಿತು. ಗುಂಡಿ ತೋಡಿದ್ದು, ಗೊಬ್ಬರ, ಫೆನ್ಸಿಂಗ್ ಸೇರಿದಂತೆ ಸುಮಾರು ₹3 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇದರಲ್ಲಿ ಅರ್ಧದಷ್ಟು ದುಡ್ಡು ಮೊದಲ ಫಸಲಿನಲ್ಲೇ ಸಿಕ್ಕಿದೆ.

## ಗಿಡಗಳ ಪೋಷಣೆಯೇ ಸವಾಲು

ಉತ್ಸಾಹದಿಂದ ಗಿಡ ನೆಟ್ಟ ಬಸವರಾಜು ಅವರಿಗೆ ಅದರ ಪೋಷಣೆ ಸವಾಲಾಗಿ ಪರಿಣಮಿಸಿತ್ತು. ಪಕ್ಕದ ತೋಟ ನೋಡಿ, ಅವರಂತೆಯೇ ಮಾಡುವ ಅವಕಾಶವಂತೂ ಇರಲಿಲ್ಲ. ಪ್ರತಿಯೊಂದಕ್ಕೂ ಸಚಿನ್ ಅವರನ್ನೇ ಸಂಪರ್ಕಿಸಬೇಕಿತ್ತು. ಅನುಭವದ ಕೊರತೆ ಅವರನ್ನು ಹಿಂಜರಿಯುವಂತೆ ಮಾಡಿತು.

'ನಾನು ಎಷ್ಟೇ ಬಾರಿ ಫೋನ್ ಮಾಡಿದರೂ ಬೇಸರಿಸಿಕೊಳ್ಳದ ಸಚಿನ್ ಅವರು ನನ್ನ ಬೆನ್ನಿಗೆ ನಿಂತು ಯಶಸ್ವಿಯಾಗಿ ಬೆಳೆ ಬೆಳೆಯಲು ಕಾರಣರಾದರು. ಗಿಡ ನೆಟ್ಟು ಒಂದು ವರ್ಷ ಎಂಟು ತಿಂಗಳಾಗಿದೆ. ಇರುವ ಒಂದು ಎಕರೆ ನಾಲ್ಕು ಗುಂಟೆ ಜಾಗದಲ್ಲಿ ಒಟ್ಟು 442 ಗಿಡ ಹಾಕಿದ್ದೇನೆ. ಇಳುವರಿ ಚೆನ್ನಾಗಿ ಬಂದಿದೆ. ಪ್ರತಿ ಗಿಡದಿಂದ 2ರಿಂದ 15 ಕೆ.ಜಿ.ಯಷ್ಟು ಆ್ಯಪಲ್ ಸಿಗುತ್ತಿದೆ. ಅಂದಾಜು 2 ಟನ್ ಫಸಲು ಸಿಗುವ ನಿರೀಕ್ಷೆಯಿದೆ' ಎನ್ನುವುದು ಸೇಬು ಲೆಕ್ಕಾಚಾರದ ಕುರಿತಂತೆ ಬಸವರಾಜು ಅವರ ಮಾತು.



ಸೇಬು ತೋಟದಲ್ಲಿ ರೈತ ಬಸವರಾಜು

'ಈಗ ನಾನು ಬರೀ ಬಸವರಾಜು ಅಲ್ಲ. ಆ್ಯಪಲ್ ಬೆಳೆದು ಅನುಭವ ದಕ್ಕಿಸಿಕೊಂಡ ಬಸವರಾಜು. ಮುಂದಿನ ವರ್ಷ ನೋಡಿ. ಸೇಬಿನ ಸೈಜು, ಇಳುವರಿ ಜಾಸ್ತಿ ಮಾಡುತ್ತೇನೆ' ಎನ್ನುವುದು ಅವರ ಆತ್ಮವಿಶ್ವಾಸದ ಮಾತು.

ಸೇಬು ಗಿಡ ನೆಟ್ಟ ಹೊಸದರಲ್ಲಿ ಅಕ್ಕಪಕ್ಕದ ಜಮೀನಿನವರು, ಊರಿನವರು ಬಸವರಾಜು ಅವರನ್ನು ನೋಡಿ ತಮಾಷೆ ಮಾಡುತ್ತಿದ್ದರು. ಗಿಡಗಳು ಹುಲುಸಾಗಿ ಬೆಳೆದು ಕಾಯಿ ಬಿಟ್ಟಾಗ ತೋಟಕ್ಕೆ ಬರುತ್ತಿದ್ದವರು, 'ಇವು ಏನ್ ಕಾಯಿ' ಎಂದು ಕೇಳುತ್ತಿದ್ದರು. 'ಆ್ಯಪಲ್ ಕಾಯಿ' ಎಂದಾಗ, 'ಆ್ಯಪಲ್ ನಮ್ ಕಡೆ ಬೆಳೆಯೋಕೆ ಸಾಧ್ಯನೇ ಇಲ್ಲ. ಅದೇನಿದ್ದರೂ ಕಾಶ್ಮೀರದಲ್ಲಿ ಮಾತ್ರ ಬೆಳೆಯೋದು' ಎನ್ನುತ್ತಿದ್ದರಂತೆ. ಹಾಗಂದವರಿಗೆಲ್ಲ 'ಆಯ್ತುಪ್ಪ' ಎನ್ನುವುದಷ್ಟೇ ಬಸವರಾಜು ಅವರ ಉತ್ತರವಾಗಿತ್ತು. ಯಾವಾಗ ಕಾಯಿಗಳು ಕೆಂಪು ಬಣ್ಣಕ್ಕೆ ತಿರುಗಿದವೋ ಆಗ ತಾತ್ಸಾರ ಮಾಡುತ್ತಿದ್ದವರೆಲ್ಲರೂ ಅಚ್ಚರಿಗೊಂಡು ಶಹಬ್ಬಾಸ್ ಹೇಳತೊಡಗಿದರು. ಸ್ವತಃ ಅವರೇ ದುಡ್ಡು ಕೊಟ್ಟು ಹಣ್ಣು ತೆಗೆದುಕೊಂಡೂ ಹೋದರು.

## ಮಾರುಕಟ್ಟೆ ಸಮಸ್ಯೆ ಇಲ್ಲ

ಸಾಮಾನ್ಯವಾಗಿ ಹಣ್ಣು–ತರಕಾರಿ ಬೆಳೆಯುವ ಹೊಸಕೋಟೆ ಭಾಗದ ರೈತರಿಗೆ ಮಾರುಕಟ್ಟೆ ಸಮಸ್ಯೆ ಇದೆ. ಆದರೆ ಬಸವರಾಜು ಅವರಿಗೆ ಸೇಬು ಮಾರಾಟಕ್ಕೆ ಮಾರುಕಟ್ಟೆ ಸಮಸ್ಯೆ ಆಗಲಿಲ್ಲ. ಯಾಕೆಂದರೆ ಎಲ್ಲೆಲ್ಲಿಂದಲೋ ಬರುವ ಜನರು ತೋಟದಲ್ಲೇ ಒಂದು, ಎರಡು, ಮೂರು ಕೆ.ಜಿ. ಯಂತೆ ಸೇಬು ಖರೀದಿಸಿ ಹೋಗುತ್ತಿದ್ದಾರೆ. ಸುಮಾರು 1 ಟನ್‌ನಷ್ಟು ಹಣ್ಣನ್ನು ತೋಟದಲ್ಲೇ ಮಾರಾಟ ಮಾಡಿದ್ದಾರೆ.

'ಇದುವರೆಗೆ ಎಷ್ಟು ಕೆ.ಜಿ. ಮಾರಿದ್ದೇನೆ ಅನ್ನುವುದು ಗೊತ್ತಿಲ್ಲ. ಓದು ಬರಹ ಅರಿಯದ ನಾನು ಆ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಮಾರಾಟ ಮಾಡಿದ ದುಡ್ಡನ್ನು ಒಂದು ಕಡೆ ಇಟ್ಟಿದ್ದೆ. ಅದನ್ನು ಲೆಕ್ಕ ಹಾಕಿದ ಬಳಿಕ ಎಷ್ಟು ಕೆ.ಜಿ. ಮಾರಾಟ ಆಗಿದೆ ಅನ್ನೋದು ಲೆಕ್ಕಕ್ಕೆ ಸಿಕ್ಕಿತು' ಅನ್ನುವ ಅವರಿಗೆ, ಬಾಯ್ತಪ್ಪಿನಿಂದ ಬೆಲೆ ಬಗ್ಗೆ ಆಡಿದ ಮಾತು ಕೊಂಚ ನಷ್ಟ ಉಂಟು ಮಾಡಿದೆಯಂತೆ.

'ಟಿ.ವಿ. ವಾಹಿನಿಯವರ ಜೊತೆ ಮಾತನಾಡುತ್ತಿದ್ದಾಗ ಬಾಯ್ತಪ್ಪಿನಿಂದ ಕೆ.ಜಿ.ಗೆ 120 ರೂಪಾಯಿ ಅಂದು ಬಿಟ್ಟೆ. ಆ ವಿಡಿಯೊ ನೋಡಿ ತೋಟಕ್ಕೆ ಬಂದವರಿಗೆಲ್ಲ ಆಡಿದ ಮಾತಿಗೆ ಕಟ್ಟುಬಿದ್ದು 120 ರೂಪಾಯಿಗೆ ಮಾರಾಟ ಮಾಡುತ್ತಿದ್ದೇನೆ. ಆಡಿದ ಮಾತು ಉಳಿಸಿಕೊಳ್ಳುವುದು ರೈತನ ಗುಣ ಅಲ್ಲವೇ' ಎಂದು ಹೇಳುವಾಗ ಬಸವರಾಜು ಮುಖದಲ್ಲೂ ಸೇಬಿನ ರಂಗು ಹಾಗೂ ಹೊಳಪು!

ಚಿತ್ರಗಳು: ಮಹಾಂತ ಕೆ.ಎಸ್.